ಇ) ಸಮುದ್ರ ಕೊರೆತಕ್ಕೆ ತಡೆಗೋಡೆ ಕಾರ್ಯಕ್ಕೆ ಕಲ್ಲಿಗಿಂತ ಮರಳು ಆಗಬಹುದೆಂಬ ನಿಲುವು ಯಾವ ತಂತ್ರಾಂಶ ಆಧಾರದ ಮೇಲೆ ನಿರ್ಣಯಿಸಲಾಗಿದೆ:

ಈ) ಸಮುದ್ರ ಕೊರೆತಕ್ಕೆ ಖಾಯಂ ಆಗಿ ಮರವಂತೆಯಲ್ಲಿ ನಿರ್ಮಿಸಿದ ಹಾಗೆ ತಡೆಗೋಡೆ ರಚಿಸಲು ಸರ್ಕಾರ ಎಷ್ಟು ಸಮಯ ತೆಗೆದುಕೊಳ್ಳುತ್ತದೆ.

ಉ) ಮಹಾರಾಷ್ಟ್ರ ಸರ್ಕಾರ ನಿರ್ಮಿಸಿದ ತಡೆಗೋಡೆ ತಂತ್ರಾಂಶ ಕರ್ನಾಟಕದಲ್ಲಿ ಅಳವಡಿಸದಿರಲು ಕಾರಣವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಸಮುದ್ರ ಕೊರೆತ ಪ್ರತಿಬಂದಿಸಲು ರಚಿಸಿರುವ ತಾಂತ್ರಿಕ ಪರಿಣಿತರ ಸಮಿತಿಯ ಸಲಹೆಯಂತೆ ಮಳೆಗಾಲದಲ್ಲಿ ಆಗುವ ಸಮುದ್ರ ಕೊರೆತವನ್ನು ತುರ್ತಾಗಿ ತಡೆಗಟ್ಟಲು ಮರಳು ಚೀಲಗಳ ತಡೆಗೋಡೆ ನಿರ್ಮಿಸಲಾಗುತ್ತಿದೆ.

ಆ) ಮರಳು ಚೀಲ ಸಿದ್ದಪಡಿಸಲು ಸಮುದ್ರ ಬದಿಯಲ್ಲಿ ತೆಗೆಯಲಾದ ಮರಳಿನ ಹೊಂಡಗಳಿಂದ ಸಮುದ್ರಕೊರತೆ ಹೆಚ್ಚಾಗುವುದಿಲ್ಲ. ಬದಲಾಗಿ ಈ ಕ್ರಮದಿಂದ ಉಬ್ಬರ ಸಮಯದಲ್ಲಿ ಮರಳು ಶೇಖರಣೆಯಾಗಿ ಈ ಪ್ರದೇಶದಲ್ಲಿ ಮರಳು ದಂಡೆ ನಿರ್ಮಾಣವಾಗುತ್ತದೆ.

ಇ) ಮಳೆಗಾಲದಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಸಂದರ್ಭದಲ್ಲಿ ಸಾರ್ವಜನಿಕರ ಜೀವ ಮತ್ತು ಆಸ್ತಿಪಾಸ್ತಿ ತುರ್ತಾಗಿ ಸಂರಕ್ಷಿಸುವ ಸಲುವಾಗಿ ಮಾತ್ರ ಮರಳಿನ ಚೀಲಗಳ ತಡೆಗೋಡೆ ತಾಂತ್ರಿಕ ಪರಿಣಿತರ ಸಮಿತಿಯ ಶಿಫಾರಸ್ಸಿನಂತೆ ನಿರ್ಮಿಸಲಾಗುತ್ತಿದೆ. ನಂತರ ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್ ಪುಣೆ, ಹಾಗೂ ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್, ಮೈಸೂರು ಇವರು ಸ್ಥಳ ಪರಿಶೀಲನೆ ಮಾಡಿ ನೀಡುವ ವಿನ್ಯಾಸಗಳಂತೆ ಕಲ್ಲಿನಿಂದ ಶಾಶ್ವತ ತಡೆಗೋಡೆ ನಿರ್ಮಿಸಲಾಗುತ್ತಿದೆ.

ಈ) ನ್ಯಾಷನಲ್ ಕೋಸ್ಟಲ್ ಪ್ರೋಟೆಕ್ಷನ್ ಪ್ರೋಜೆಕ್ಟ್ (NCPP)ಅಡಿಯಲ್ಲಿ ಸುಮಾರು 48.875 ಕಿ.ಮೀ. ಅದ್ದಕ್ಕೆ ರಾಜ್ಯದ ಕರಾವಳಿಯ ವಿವಿಧ ಪ್ರದೇಶಗಳಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಅನುಮೋದನೆಯ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಉ) ಆಯಾ ಕಡಲ ತೀರದ ಪ್ರದೇಶಕ್ಕೆ ಅನುಗುಣವಾಗಿ ತಾಂತ್ರಿಕ ತಜ್ಞರು ನೀಡುವ ವಿನ್ಯಾಸದಂತೆ ತಡೆಗೋಡೆ ನಿರ್ಮಿಸಬೇಕಾಗಿರುತ್ತದೆ. ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್ ಪುಣೆ ಹಾಗೂ ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್, ಮೈಸೂರು ಇವರು ನೀಡುವ ವಿನ್ಯಾಸಗಳಂತೆ ರಾಜ್ಯದಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲಾಗುತ್ತಿದೆ.

5391(5788) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀಡಿ ಕಾರ್ಮಿಕರನ್ನು ಗುರುತಿಸಿದ ಹಾಗೆ ಮೀನುಗಾರಿಕಾ ಕಾರ್ಮಿಕರನ್ನು ಗುರುತಿಸುವ ಕಾರ್ಯ ಯಾವಾಗಿನಿಂದ ಪ್ರಾರಂಭಿಸಲಾಗುವುದು;

ಆ) ಬೀಡಿ ಕಾರ್ಮಿಕರಿಗೆ ಹಾಗೂ ಅವರ ಮಕ್ಕಳಿಗೆ ನೀಡುವ ವಿದ್ಯಾರ್ಥಿ ವೇತನ ಸಹಿತವಾಗಿ ಇತರ ಸೌಲಭ್ಯ ನೀಡಲು ಇರುವ ಅಡಚಣೆಯಾತ್ಮಕ ತೊಂದರೆಯೇನು;

ಇ) ಬೀಡಿ ಕಾರ್ಮಿಕರ ಬದುಕು ನಿಶ್ಚಿತ, ಆದರೆ ಮೀನುಗಾರಿಕಾ ಕಾರ್ಮಿಕರ ಬದುಕು ಅನಿಶ್ಚಿತವಾದರೂ ಇವರ ಅಭಿವೃದ್ಧಿಗೆ ಸರ್ಕಾರ ಪ್ರತ್ಯೇಕ ಪ್ಯಾಕೆಟ್‌ಕೊಡದಿರಲು ಕಾರಣವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಕಾರ್ಮಿಕರನ್ನು ಗುರುತಿಸಿದ ಹಾಗೆ ಮೀನುಗಾರಿಕಾ ಕಾರ್ಮಿಕರನ್ನು ಗುರುತಿಸುವ ಕಾರ್ಯಕ್ರಮವು ಮೀನುಗಾರಿಕೆ ಇಲಾಖೆಯಲ್ಲಿ ಇರುವುದಿಲ್ಲ.

ಆ) ಬೀಡಿ ಕಾರ್ಮಿಕರಿಗೆ ಹಾಗೂ ಅವರ ಮಕ್ಕಳಿಗೆ ನೀಡುವ ವಿದ್ಯಾರ್ಥಿ ವೇತನ ಸಹಿತವಾಗಿ ಇತರೆ ಸೌಲಭ್ಯ ಮೀನುಗಾರಿಕೆ ಕಾರ್ಮಿಕರಿಗೆ ನೀಡಲು ಮೀನುಗಾರಿಕೆ ಇಲಾಖೆಯಲ್ಲಿ ಯಾವುದೇ ಕಾರ್ಯಕ್ರಮ ಇರುವುದಿಲ್ಲ.

ಇ) ಮೀನುಗಾರಿಕೆ ಇಲಾಖೆಯಲ್ಲಿ ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆ ನಿಷೇಧಿತ ಅವಧಿಯಲ್ಲಿ ಉಳಿತಾಯ ಮತ್ತು ಪರಿಹಾರ ಯೋಜನೆಯಿಂದ ಮೀನುಗಾರಿಕೆ ಪರಿಹಾರ ನೀಡುವ ಕಾರ್ಯಕ್ರಮವಿದೆ. ಇದರ ಹೊರತು ಯಾವುದೇ ಪ್ರತ್ಯೇಕ ಪ್ಯಾಕೇಜ್ ಇರುವುದಿಲ್ಲ.

5392(6201) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 2004–05 ಮತ್ತು 2005–06ನೇ ಸಾಲಿಗೆ ಅನ್ವಯವಾಗುವಂತೆ ಮಾನ್ಯ ಮುಖ್ಯ ಮಂತ್ರಿಯವರ ವಿವೇಚನಾ ಕೋಟಾದ ಅಡಿಯಲ್ಲಿ ವಿತರಿಸಿದ ಬಿಡಿಎ ನಿವೇಶನದ ಸಂಖ್ಯೆ ಎಷ್ಟು;

ಆ) ಯಾವ ಯಾವ ವರ್ಗದ ನಾಗರೀಕರಿಗೆ ಎಷ್ಟೆಷ್ಟು ಅಳತೆಯ ನಿವೇಶನಗಳನ್ನು ಮಂಜೂರು ಮಾಡಲಾಗಿದೆ; (ವಿವರ ನೀಡುವುದು); ಎಷ್ಟು ಜನ ಹಾಲಿ ಮತ್ತು ಮಾಜಿ ಶಾಸಕರುಗಳಿಗೆ ಸದರಿ ನಿವೇಶನಗಳನ್ನು ಮಂಜೂರು ಮಾಡಲಾಗಿದೆ (ವಿವರ ನೀಡುವುದು);

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು (ಬಿಡಿಎ) ಹೆಚ್.ಎಸ್.ಆರ್. ಬಡಾವಣೆ, ಅರ್ಕಾವತಿ ಬಡಾವಣೆ ಮತ್ತು ವಿಶ್ವೇಶ್ವರಯ್ಯ ಬಡಾವಣೆಗಳ ರಚನೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯ ವಿಸ್ತೀರ್ಣ ಎಷ್ಟು; ಮತ್ತು ಅವುಗಳಲ್ಲಿ ನ್ಯಾಯಾಲಯದಲ್ಲಿ ಭೂಮಾಲೀಕರು ಹೂಡಿದ ಮೊಕದ್ದಮೆಗಳ ಪ್ರಕರಣಗಳು ಎಷ್ಟು;

ಈ) ಈ ಕಾರಣಕ್ಕಾಗಿ ಹಂಚಿಕೆಯಿಂದ ಹೊರತಾಗಿ ಇಡಲಾಗಿರುವ ಭೂಮಿಯ ವಿಸ್ತೀರ್ಣ ಎಷ್ಟು; ನ್ಯಾಯಾಲಯದ ಸದರಿ ಪ್ರಕರಣಗಳು ಯಾವ ಹಂತದಲ್ಲಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ದಿನಾಂಕ: 01–04–2004 ರಿಂದ 22–07–2005 ರವರೆಗೆ ಸರ್ಕಾರದ ದಿನಾಂಕ: 6–8–1997ರ ಮಾರ್ಗಸೂಚಿ ಯನ್ವಯ 59 ವ್ಯಕ್ತಿಗಳಿಗೆ ಜಿ ಪ್ರವರ್ಗದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೆಚ್.ಎಸ್.ಆರ್. ಅರ್ಕಾವತಿ ಮತ್ತು ವಿಶ್ವೇಶ್ವರಯ್ಯ ಬಡಾವಣೆಗಳಿಗಾಗಿ ಈ ಕೆಳಕಂಡಂತೆ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ:–